
# ಅಬ್ದುಲ್ ರಶೀದ್



ಚಿತ್ರ: ಲೋಕೇಶ್ ಮೊಸಳೆ

'ಹಾಲು ಕುಡಿದ ಹುಡುಗಾ', 'ಪ್ರಾಣಪಕ್ಷಿ' ಎಂಬ ಕಥಾಸಂಕಲನಗಳ ಮೂಲಕ ಗುರುತಿಸಿಕೊಂಡಿರುವ ಅಬ್ದುಲ್ ರಶೀದ್ ಕವಿ, ಅಂಕಣಕಾರರು ಕೂಡ. ಅವರ ಕತೆಗಳು ಕನ್ನಡ ಕಥಾಲೋಕಕ್ಕೆ ವಿಶಿಷ್ಟ ನುಡಿಗಟ್ಟನ್ನು ಕೊಟ್ಟಿವೆ. 'ನರಕದ ಕೆನ್ನಾಲಿಗೆಯಂತ ನಿನ್ನ ಬೆನ್ನಹುರಿ' ಅವರ ಕವನಸಂಕಲನವಾದರೆ, 'ಮಾತಿಗೂ ಆಚೆ', 'ಅಲೆಮಾರಿಯ ದಿನಚರಿ', 'ಕಾಲುಚಕ್ರ' ಅವರ ಗದ್ಯಬರಹಗಳ ಪುಸ್ತಕಗಳಾಗಿವೆ. 'ಹೂವಿನ ಕೊಲ್ಲಿ' ರಶೀದರ ಕಾದಂಬರಿ. ಇಂಗ್ಲೆಂಡ್‌ನ ಥಾಮ್ಸನ್ ಫೌಂಡೇಶನ್‌ನಿಂದ ರೇಡಿಯೋ ಸಾಕ್ಷ್ಯಚಿತ್ರ ನಿರ್ಮಾಣಕ್ಕಾಗಿ ಐರ್ಲೆಂಡಿಗೆ ಹೋಗಿ ಬಂದಿದ್ದಾರೆ. ಮೈಸೂರು ವಿಶ್ವವಿದ್ಯಾಲಯದಿಂದ ಇಂಗ್ಲಿಷ್ ಸಾಹಿತ್ಯದಲ್ಲಿ ಎಂ.ಎ. ಪದವಿ. ಮೈಸೂರು ಆಕಾಶವಾಣಿಯಲ್ಲಿ ಕಾರ್ಯಕ್ರಮ ನಿರ್ವಾಹಕರಾಗಿರುವ ರಶೀದ್, ಕೊಡಗು ಜಿಲ್ಲೆಯ ಸುಂಟಿಕೊಪ್ಪದವರು. ಪ್ರಸ್ತುತ 'ಕೆಂಡಸಂಪಿಗೆ' ಎಂಬ ಅಂತರ್ಜಾಲ ಸಾಹಿತ್ಯ ಪತ್ರಿಕೆಯ ಸಂಪಾದಕರು.

ನನ್ನ ಕತೆಗಳನ್ನು ಕೇಳಲೆಂದೇ ದೂರದ ಹೈಕಮಾಂಡಿನಿಂದ ಒಬ್ಬರು ಬಂದರು. ಒಂದು ಇರುಳೆಲ್ಲಾ ಕುಕ್ಕರಹಳ್ಳಿ ಕೆರೆಯ ಲತಾಮಂಟಪದಲ್ಲಿ ಅವರು ನನ್ನ ಪಕ್ಕದಲ್ಲಿ ಮಗುವಿನಂತೆ ಕುಳಿತು ನನ್ನೆಲ್ಲ ಕತೆಗಳನ್ನು ಕೇಳಿಸಿಕೊಂಡರು. ಅವಳನ್ನು ಹುಡುಕಿಕೊಂಡು ಹೋಗುತ್ತಿದ್ದ ಹಾದಿಯಲ್ಲಿ ಮೂಡುತ್ತಿದ್ದ ಚಂದ್ರ, ಏಳುತ್ತಿದ್ದ ಕಾವಳ, ಹಾರುತ್ತಿದ್ದ ತೇನೆ ಹಕ್ಕಿಗಳು, ಅವಳ ಕದಪುಗಳಲ್ಲಿ ಮೂಡುತ್ತಿದ್ದ ಗುಲಗಂಜಿಯಂತಹ ಪ್ರೇಮದ ಕುರುಹುಗಳು ಮತ್ತು ಮಾಂಸಾಹಾರಿಯಾಗಿದ್ದ ನನ್ನ ಮತ್ತು ಸಸ್ಯಾಹಾರಿಯಾಗಿದ್ದ ಅವಳ ನಡುವೆ ನಡೆಯುತ್ತಿದ್ದ ವೈಚಾರಿಕ ಪ್ರೇಮ ಕಲಹಗಳ ಕುರಿತು ನಾನು ಅರೆನಿಮೀಲಿತ ನೇತ್ರಗಳಿಂದ ಅವರಿಗೆ ಆ ಇರುಳಿನಲ್ಲಿ ಕತೆ ಹೇಳಿಬಿಟ್ಟಿದ್ದೆ. ಒಂದು ರೀತಿಯಲ್ಲಿ ಹೇಳಿದ್ದು ಒಳ್ಳೆಯದೇ ಆಯಿತು. ಏಕೆಂದರೆ ಇರುಳಿಡೀ ನನ್ನ ಕತೆ ಕೇಳಿದ ಅವರು ಕೇಂದ್ರಸ್ಥಾನಕ್ಕೆ ತೆರಳಿ ಹೈಕಮಾಂಡಿಗೆ ನನ್ನ ಬಗ್ಗೆ ಒಂದು ವಿವರವಾದ ವರದಿಯನ್ನು ಕೊಟ್ಟುಬಿಟ್ಟಿದ್ದರು. ಅದರಲ್ಲಿ ನನ್ನಲ್ಲಿ ಕ್ರಾಂತಿಕಾರಿಯ ಗುಣಗಳಿಗಿಂತ ಒಬ್ಬ ಮಧ್ಯಮ ವರ್ಗದ ಬೂರ್ಜ್ವಾ ಪ್ರೇಮಿಯ ಗುಣಗಳೇ ಹೆಚ್ಚಿರುವುದೆಂತಲೂ ನನ್ನಿಂದ ಸಮಾಜಕ್ಕೆ ಹೆಚ್ಚಿನ ಪ್ರಯೋಜನಗಳಾಗುವ ಸಾಧ್ಯತೆ ಇಲ್ಲವೆಂದೂ ಹೇಳಲಾಗಿತ್ತು. ಹಾಗಾಗಿ ಕ್ರಾಂತಿಯ ದಾರಿಯಿಂದ ವಿಮುಖನಾದ ನಾನು ಇನ್ನು ಪ್ರೇಮಕ್ಕೆ ಜೈ ಎಂದು ತೀರ್ಮಾನಿಸಿ ಅವಳಲ್ಲಿಗೆ ಮರಳಿ ಹೋಗಿದ್ದೆ. ಆದರೆ ಅಷ್ಟು ಹೊತ್ತಿಗೆ ಆಕೆಯೂ ಒಂದು ಕಠಿಣವಾದ ತೀರ್ಮಾನ ತೆಗೆದುಕೊಂಡು ಬಿಟ್ಟಿದ್ದಳು. ಅದು ಏನೆಂಬುದು ಇಲ್ಲಿ ಬೇಡ ಬಿಡಿ.

ಆದರೆ ಆ ನಂತರ ರಾಜಕೀಯ ಕಾರಣಗಳಿಗಾಗಿ ಕತೆ ಹೇಳುವುದನ್ನು ಮತ್ತು ಬರೆಯುವುದನ್ನು ನಿಲ್ಲಿಸಿಬಿಟ್ಟಿದ್ದೆ. ಕತೆ ಹೇಳುವುದಾದರೆ ಪ್ರೇಮ ಯಾಚನೆಯ ಕಾರಣಕ್ಕಾಗಿ ಅಥವಾ ಪ್ರೇಮ ವೈಫಲ್ಯದ ಖಿನ್ನತೆಯಿಂದ ಹೊರಬರುವುದಕ್ಕಾಗಿ ಎಂಬುದು ನನ್ನ ಆನಂತರದ ದಿನಗಳ ಆಲೋಚನೆಯಾಗಿತ್ತು. ಆನಂತರದ ಕಾಲಘಟ್ಟಗಳಲ್ಲಿ ಅದೂ ಬದಲಾಗುತ್ತಾ ಬಂತು. ಕಲೆ, ಕತೆಗಾರಿಕೆ, ಕಾವ್ಯ ಮತ್ತು ಸೌಂದರ್ಯಗಳನ್ನು ಮಿಕಗಳಂತೆ ಅಟ್ಟಿಸಿಕೊಂಡು ಬೇಟೆಯಾಡುವ